MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 24-12-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

### ಸತತ 2ನೇ ವಾರ ಪಾಮೆಣ್ಣೆ ದರ ಇಳಿಕೆ

ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ ಸತತ 2ನೇ ವಾರ ಇಳಿಕೆಯಾಗಿ 10 ದಿನಗಳ ಕನಿಷ್ಠ ಅಂತ್ಯದ ದರಕ್ಕಿಳಿದಿದೆ. ದುರ್ಬಲ ಬೇಡಿಕೆ ಹಾಗೂ ಪರ್ಯಾಯ ಖಾದ್ಯತೈಲಗಳ ದರ ಇಳಿಕೆ ಹಾಗೂ ಇತರ ಜಾಗತಿಕ ವಿದ್ಯಮಾನಗಳಿಂದ ದರ ಇಳಿಕೆಯಾಗಿದೆಯೆನ್ನಲಾಗಿದೆ. ಕಾಡುನಾಶಗೊಳಿಸಿ ಉತ್ಪಾದಿಸುವ ಖಾದ್ಯತೈಲ ಖರೀದಿಸದಿರುವ ಯುರೋಪಿಯನ್ ನೀತಿಯಿಂದ ಪಾಮೆಣ್ಣೆಗೆ ಅಲ್ಲಿನ ಬೇಡಿಕೆ ಕಡಿಮೆಯಾಗುವ ಸಾಧ್ಯತೆಯಿದ್ದು, ದರದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ.

### ಜೋಳ ದರ ಹೆಚ್ಚಳ

ಫೀಡ್ಸ್ ತಯಾರಕರು, ಪೌಲ್ಟ್ರಿ ವಲಯ ಹಾಗೂ ಸಗಟು ಖರೀದಿದಾರರಿಂದ ಹೆಚ್ಚಿದ ಬೇಡಿಕೆಯಿಂದಾಗಿ ಜೋಳ ದರ ಹೆಚ್ಚಳವಾಗಿದೆ. ದೇಶೀ ಹಾಗೂ ಜಾಗತಿಕ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆಯಿಂದ ಜೋಳ ದರ ಹೆಚ್ಚಳವಿದೆ. ಮುಂದಿನ ಬೆಳೆಯ ಆವಕವಾಗುವ ತನಕ ದರ ಹೆಚ್ಚಳದಲ್ಲೇ ಮುಂದುವರಿಯುವ ಸಾಧ್ಯತೆಯಿದೆ.

### ಸರಕಾರಿ ಏಜೆನ್ಸಿಗಳಿಂದ ಬಾಂಗ್ಲಾ ದೇಶಕ್ಕೆ 2 ಲಕ್ಷ ಟನ್ ಅಕ್ಕಿ ರಫ್ತು

ಸರಕಾರದಿಂದ ಸರಕಾರ ಒಡಂಬಡಿಕೆಯನ್ವಯ ಸರಕಾರಿ ಏಜೆನ್ಸಿಗಳು ಬಾಂಗ್ಲಾದೇಶಕ್ಕೆ 2 ಲಕ್ಷ ಟನ್ ಅಕ್ಕಿ ರಫ್ತು ಮಾಡಲಿದೆಯೆನ್ನಲಾಗಿದೆ. ಅಲ್ಲದೆ 50000 ಟನ್ ಅಕ್ಕಿ ಖಾಸಗಿ ವರ್ತಕರು ಬಾಂಗ್ಲಾದೇಶಕ್ಕೆ ರಫ್ತು ಮಾಡಲಿದ್ದಾರೆನ್ನಲಾಗಿದೆ. ಭಾರತೀಯ ಸಹಕಾರಿ ಏಜೆನ್ಸಿಗಳು ಖಾಸಗಿ ವರ್ತಕರ ಟೆಂಡರ್ ದರಕ್ಕಿಂತ 11 ಶೇಕಡಾ ಹೆಚ್ಚಳದ ದರದಲ್ಲಿ ರಫ್ತು ಮಾಡಲಿದ್ದಾರೆನ್ನಲಾಗಿದೆ.

ದೇಶಿ ಆಹಾರ ಭದ್ರತಾ ನೀತಿಯನ್ವಯ ಡಿಸೆಂಬರ್ 2023 ರ ತನಕ ಕೇಂದ್ರ ಸರಕಾರದಿಂದ ಉಚಿತ ಅಕ್ಕಿ ಪೂರೈಕೆ ದೇಶಿ ಆಹಾರ ಭದ್ರತಾ ನೀತಿಯನ್ವಯ ಕೇಂದ್ರ ಸರಕಾರ ಮುಂದಿನ 1 ವರ್ಷ ಡಿಸೆಂಬರ್ 2023 ರ ತನಕ ಪಡಿತರ ವಿತರಣೆಯಲ್ಲಿ ಕೆ.ಜಿ.ಗೆ ರೂ.2-3 ರ ದರದಲ್ಲಿ ವಿತರಣೆ ಮಾಡಲಿದೆಯೆನ್ನಲಾಗಿದೆ. ಹಾಗೇಯೇ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಯೋಜನೆಯಲ್ಲಿ 2023 ಡಿಸೆಂಬರ್ 31 ರ ತನಕ ವಿಸ್ತರಿಸಲಾಗಿದೆಯೆನ್ನಲಾಗಿದೆ. ಇದಕ್ಕಾಗಿ ಕೇಂದ್ರಕ್ಕೆ 2 ಲಕ್ಷ ಕೋಟಿ ರೂಪಾಯಿಗಳು ವೆಚ್ಚವಾಗಲಿದೆಯೆನ್ನಲಾಗಿದೆ.